# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶೇಕಡ 3ರ ಬಡ್ಡಿ ದರದಲ್ಲಿ ರೈತರಿಗೆ ರೂ.1.00 ಲಕ್ಷ ಬೆಳೆ ಸಾಲವನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂ:ಕೃಇ/48/ಕೃಯೋಕಾ/2014, ಬೆಂಗಳೂರು, ದಿ: 09-05-2014.

2) ಕೃಷಿ ನಿರ್ದೇಶಕರ ಪತ್ರ ಸಂ: ಉಕೃನಿ(ಕೃನಿ)/ತಾಂ-2/115/2009-10, ದಿ:29-05-2014.

## ಪ್ರಸ್ತಾವನೆ

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ 2014-15ನೇ ಸಾಲಿನಲ್ಲಿ ಮುಂದುವರೆಸಲಾದ ಚಾಲ್ತಿ ಯೋಜನೆಗಳ ರಾಜ್ಯವಲಯ ಯೋಜನೆಗಳ ರಾಜ್ಯವಲಯ ಯೋಜನೆಗಳಲ್ಲೊಂದಾದ ಇತರೆ ಕೃಷಿ ಯೋಜನೆಗಳು (ಲೆಕ್ಕ ಶೀರ್ಷಿಕೆ:2401-00-800-1-40) ಯೋಜನೆಗೆ ರೂ.960.00 ಲಕ್ಷಗಳನ್ನು ಮೊದಲನೇ ತ್ರೈಮಾಸಿಕದ ಅನುದಾನವಾಗಿ ಬಿಡುಗಡೆ ಮಾಡಲು ಸರ್ಕಾರವು ಮಂಜೂರಾತಿ ನೀಡಿದೆ.

ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ 2009-10ನೇ ಸಾಲಿನಲ್ಲಿ ಶೇ3 ರ ಬಡ್ಡಿದರದಲ್ಲಿ ರೈತರಿಗೆ ರೂ.1.00 ಲಕ್ಷಗಳ ಬೆಳೆಸಾಲವನ್ನು ಮಂಜೂರು ಮಾಡುವ ಯೋಜನೆಗೆ ರೂ.40.00 ಕೋಟಿ ಅನುದಾನವನ್ನು ಒದಗಿಸಿದ್ದು, ಸದರಿ ಮೊತ್ತವನ್ನು SLBC ಯ Sweep in and sweep out ಖಾತೆಯಲ್ಲಿಡಲಾಗಿದ್ದು, ದಿನಾಂಕ:24-5-2014ರವರೆಗೆ ಸದರಿ ಯೋಜನೆಗೆ ರೂ.43,69,05,195 ಕೋಟಿ ಹಣವನ್ನು ಎಸ್.ಎಲ್.ಬಿ.ಸಿ ರವರಿಗೆ ಬಿಡುಗಡೆ ಮಾಡಲಾಗಿದೆ. SLBC ಯ Sweep in and sweep out ಖಾತೆಯಲ್ಲಿಡಲಾಗಿದ್ದ ರೂ.40.00 ಕೋಟಿಗೆ ಒಟ್ಟಾರೆ ರೂ.4.93ಕೋಟಿ ಬಡ್ಡಿ ಬಂದಿರುತ್ತದೆ. 2014-15ನೇ ಸಾಲಿಗೆ ಶೇ 3 ರ ಬಡ್ಡಿ ದರದಲ್ಲಿ ಬೆಳೆಸಾಲಕ್ಕೆ ಸಹಾಯಧನ ಯೋಜನೆಗೆ (ಲೆಕ್ಕ ಶೀರ್ಷಿಕೆ:2401-00-800-1-40, ಉಪ ಶೀರ್ಷಿಕೆ: 059) ಮರುಹಂಚಿಕೆಯಾಗಿರುವ ರೂ.410.00 ಲಕ್ಷಗಳನ್ನು SLBC ಯ Sweep in and sweep out ಖಾತೆಯಲ್ಲಿಡಲು ಮತ್ತು ಸಹಾಯಾನುದಾನದ (Grant-in-aid) ಬಿಲ್ಲಿಗೆ ಮೇಲು ಸಹಿ ಮಾಡುವ ಅಧಿಕಾರವನ್ನು ಕೃಷಿ ನಿರ್ದೇಶಕರಿಗೆ ನೀಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ/45/ಕೃಮಸ/2014, ಬೆಂಗಳೂರು,**
**ದಿ: 30-07-2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 2014-15ನೇ ಸಾಲಿನಲ್ಲಿ ರಾಜ್ಯವಲಯ ಯೋಜನೆಯಾದ ಇತರೆ ಕೃಷಿ ಯೋಜನೆಗಳು (ಲೆಕ್ಕ ಶೀರ್ಷಿಕೆ:2401-00-800-1-40 ಉಪ ಶೀರ್ಷಿಕೆ:059) ಈಗಾಗಲೇ ಬಿಡುಗಡೆ ಮಾಡಿರುವ ಮೊದಲನೆ ತ್ರೈಮಾಸಿಕ ಅನುದಾನದಲ್ಲಿ ಬೆಳೆ ಸಾಲಕ್ಕೆ ಸಹಾಯಧನಕ್ಕೆ ಹಂಚಿಕೆ ಮಾಡಿಕೊಂಡಿರುವ ರೂ.410.00 ಲಕ್ಷಗಳನ್ನು (ನಾಲ್ಕು ನೂರಾ ಹತ್ತು ಲಕ್ಷ ರೂಪಾಯಿಗಳು ಮಾತ್ರ) ರಾಜ್ಯಮಟ್ಟದ ಬ್ಯಾಂಕರುಗಳ ಸಮಿತಿಯ (ಎಸ್.ಎಲ್.ಬಿ.ಸಿ) Sweep in and sweep out ಖಾತೆಯಲ್ಲಿಡಲು ಮಂಜೂರಾತಿ ನೀಡಿದೆ. ಸದರಿ ಸಂಸ್ಥೆಯು ಸಲ್ಲಿಸುವ ಸಹಾಯಾನುದಾನದ (Grant-in-aid) ಬಿಲ್ಲುಗಳಿಗೆ ಮೇಲು ಸಹಿ ಮಾಡುವ ಅಧಿಕಾರವನ್ನು ಕೃಷಿ ನಿರ್ದೇಶಕರಿಗೆ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜ್ಯೋತಿ.ಆರ್.ಜೆ),
ಸರ್ಕಾರದ ಅಧೀನ ಕಾರ್ಯದರ್ಶಿ,

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂ:5328, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂ:5328, ಬೆಂಗಳೂರು-01.
3. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂ:5329, ಬೆಂಗಳೂರು
4. ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
7. ಸಂಚಾಲಕರು, ಎಸ್.ಎಲ್.ಬಿ.ಸಿ, ಸಿಂಡಿಕೇಟ್ ಬ್ಯಾಂಕ್, ಗಾಂಧಿನಗರ, ಬೆಂಗಳೂರು-09.
8. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಮಾಹಿತಿಗಾಗಿ ಪ್ರತಿ:-**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು.
2. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-3 & 4), ವಿಧಾನಸೌಧ, ಬೆಂಗಳೂರು.
3. ನಿರ್ದೇಶಕರು, (ಪಿಎಂಯು), ಯೋಜನೆ, ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಉಪ ಕಾರ್ಯದರ್ಶಿ-1 ರವರ ಆಪ್ತ ಸಹಾಯಕರು, ಕೃಷಿ ಇಲಾಖೆ.